ಎಳೆಯಿತು. ರಸ್ತೆ ನೆನೆದು ಗೋಂದಾಗಿದ್ದರಿಂದ ಝೀಕನೆ ಜಾರಿತು. ಬಲಭಾಗದಲ್ಲಿ ಹುಡುಗಿಯೊಬ್ಬಳು ಹೋಗುತ್ತಿದ್ದಳು. ಕೊಡೆ ಹಿಡಿದಿದ್ದರಿಂದ ಸೊಂಟದ ಮೇಲ್ಭಾಗ ಕಾಣುತ್ತಿರಲಿಲ್ಲ. ಸ್ಕರ್ಟು ತೊಟ್ಟಿದ್ದರಿಂದ ಮಂಡಿಯ ಕೆಳಭಾಗ ಕಾಣುತ್ತಿತ್ತು.

ಅವಳಿಗೆ ತಾನು ಡಿಕ್ಕಿ ಹೊಡೆಯಬಾರದೆಂಬ ಅತಿ ಎಚ್ಚರಿಕೆಯ ಗಾಬರಿಯ ಕಾರಣದಿಂದಲೇ ಆತ ಅವಳ ಮೇಲೇ ಸೈಕಲ್ ಬಿಟ್ಟಿದ್ದು! ಬಳುಕಿ ನಡೆಯುತ್ತಿದ್ದ ಮಲೆನಾಡ ಹುಡುಗಿಯ ಸಣ್ಣ ನಡುವಿಗೆ ಹ್ಯಾಂಡಲ್ ಬಲವಾಗಿ ಗುದ್ದಿದಾಗ ಅವಳೆಲ್ಲೋ, ಅವಳ ಕೊಡೆ ಎಲ್ಲೋ. ಅವಳ ಪುಸ್ತಕಗಳೆಲ್ಲೋ.

ದೇವರಾಜ ದೌಡಾಯಿಸಿದ್ದರೆ ಬಚಾವಾಗುತ್ತಿದ್ದ. ಆದರೆ ಅವನದು ಶಿಶು ಮುಗ್ಧತೆ. ನಿರ್ವಂಚನೆಯ ಭಾವ. ಸೈಕಲ್ಲು ಎತ್ತಿ ನಿಲ್ಲಿಸಿ ಅವಳ ಪುಸ್ತಕ – ಕೊಡೆಗಳನ್ನು ಎತ್ತಿಕೊಟ್ಟ. 'ತಪ್ಪಾಯ್ತು ಕಣ್ರಿ, ಗೊತ್ತಾಗ್ಲಿಲ್ಲ' ಅಂತ ದೈನ್ಯತೆ ಬೆರೆಸಿ ಅವಳ ಮುಂದೆ ನಿಂತ.

"ಶಟಪ್... ಯೂ ಫೂಲ್" ಅಂತ ಹುಡುಗಿ ದೇವರಾಜನ ಮುಗ್ಧ ಮುಖದ ಮೇಲೆ ಫಟೀರನೆ ಬಾರಿಸಿಬಿಟ್ಟಳು. ಈ ಹಿಂದೆ ಹೈಸ್ಕೂಲಿನಲ್ಲಿ ಕೆನ್ನೆಗೇಟು ತಿಂದಿದ್ದರೂ ಕಾರವಾರದಲ್ಲಿ ಈ ತುಂಡು ಲಂಗದ ಹುಡುಗಿಯ ಕೈಯಿಂದ ಏಟು ತಿನ್ನಬೇಕಾಗುತ್ತದೆಂದು ಕನಸು ಮನಸ್ಸಿನಲ್ಲೂ ಆತ ಎಣಿಸಿರಲಿಲ್ಲ. ಅಳು ಬಂತು. ಕಣ್ಣು ತುಂಬಿಕೊಂಡು ಪೆಚ್ಚಾಗಿ ನಿಂತಿದ್ದ ದೇವರಾಜನನ್ನು ಲೆಕ್ಕಿಸದೆ ಶಪಥ ತೊಟ್ಟವಳಂತೆ ಬಿರ ಬಿರನೆ ಕಾಲೇಜು ರಸ್ತೆ ಹಿಡಿದಳು.

★★★

"ಯಾಕೆ ಮಂಕಾಗಿದ್ದಿ? ಹುಶಾರಿಲ್ಲವಾ?" ಅಂತ ಅಕ್ಕ ಕೇಳಿದರೂ ಏನೂ ಹೇಳದೆ ಹೊರಗಿನ ರೂಮಿನಲ್ಲಿದ್ದ ಹಗ್ಗದ ಮಂಚದ ಮೇಲೆ ಅಂಗಾತ ಮಲಗಿಕೊಂಡ. ಈ ಊರಲ್ಲಿ ಕಾಲಿಟ್ಟ ಕಡೆ ಎಲ್ಲಾ ಜಾರ್ತದೆ. ನಾನೇನು ಬೇಕೂಂತ ಡಿಕ್ಕಿ ಹೊಡೆದ್ನಾ? ಅಷ್ಟಕ್ಕೇ ಕೆನ್ನೆಗೆ... ಅವಳೇನು ನಮ್ಮ ಕಾಲೇಜೋ ಏನೋ... ನಾಳೆ ಕ್ಲಾಸಿಗೆ ಹೋದರೆ ಏನು ಮಾಡ್ತಾಳೋ... ದೇವರಾಜನಿಗೆ ಚಿಂತೆಗಿಟ್ಟುಕೊಂಡಿತು. ಸಂಜೆ ಭಾವ ಬಂದು ಫಿಶ್ ಮಾರ್ಕೆಟ್‌ಗೆ ಕರೆದರೂ ಹೋಗಲಿಲ್ಲ. ಸರಿಯಾಗಿ ಉಣ್ಣದೆ ಮಲಗಿಬಿಟ್ಟ.

"ಪ್ರೈವೇಟ್ ಕಾಲೇಜು. ಇಲ್ಲಿ ಫೀಜು ಜಾಸ್ತಿ. ಎಲ್ಲಾ ಬರೇ ಕೊಂಕಣಿ ಮಾತಾಡ್ತಾರೆ. ನನಗರ್ಥವಾಗೋದಿಲ್ಲ. ನಾನು ಮಂಡ್ಯದ ಕಾಲೇಜಿಗೆ ಸೇರ್ತೀನಿ" ಅಂತ ಅಕ್ಕನೆದುರು ಬೆಳಿಗ್ಗೆ ತಿಂಡಿ ತಿನ್ನುವಾಗ ಗೊಣಗಿದ. ಅಕ್ಕ ಗದರಿಸಿಯೇ ಬಿಟ್ಟಳು.

"ಫೀಸು ಜಾಸ್ತಿ ಆದ್ರೆ ನಿಂಗೇನು? ನಿಮ್ಮ ಭಾವ ಕೊಡ್ತಾರೆ. ಮೊದಮೊದಲು ಹಂಗನ್ನುತ್ತೆ. ಮುಂದಕ್ಕೆ ಎಲ್ಲಾ ಅರ್ಥವಾಗ್ತದೆ. ಬೇಕಾದರೆ ಟ್ಯೂಶನ್‌ಗೆ ಸೇರಿಸ್ತಾರೆ. ಇಷ್ಟು ದೂರ ಬಂದು ವಾಪಸ್ಸು ಹೋದ್ರೆ ಮರ್ಯಾದೆ ಬರ್ತದಾ? ಕಷ್ಟಪಟ್ಟು ಓದು... ಸಂಜೆ ಬೇಗ ಮನೆಗೆ ಬಾ. ಇವರ ಸ್ನೇಹಿತರ ಮನೇಲಿ ಊಟಕ್ಕೆ ಕರೆದಿದ್ದಾರಂತೆ. ಎಲ್ಲಾ ಹೋಗೋಣ."

...ದೇವರಾಜನ ಬಾಯಿ ಬಂದ್ ಆಯ್ತು. ಸೈಕಲ್ ಡಿಕ್ಕಿಯ ಕಥೆಯನ್ನು ಅಕ್ಕನಿಗೆ ಹೇಳಿಬಿಡಲೇ ಅಂತ ಯೋಚಿಸಿದ. ಬೇಡವೆಂದು ಮತ್ತೆ ಸುಮ್ಮನಾದ. ಅಳುಕುತ್ತಾ ಕಾಲೇಜಿಗೆ ಹೋದ.

ಸುರೇಶ್ ಮಹಾಲೆ ಫಿಸಿಕ್ಸ್ ಪಾಠ ಮಾಡಲು ಬಂದರು. ಇನ್ನೂ ಅಟೆಂಡೆನ್ಸ್ ಹಾಕಿರಲಿಲ್ಲ. ಜವಾನ ಬಂದು ದೇವರಾಜನನ್ನು ಪ್ರಿನ್ಸಿಪಾಲರ ಕೋಣೆಗೆ ಕಳಿಸುವಂತೆ ಕೊಂಕಣಿಯಲ್ಲಿ ಕೇಳಿದಾಗ ಇಡೀ ಕ್ಲಾಸಿಗೇ ಅಚ್ಚರಿ. ಮೈಯೆಲ್ಲಾ ಹಿಡಿಯಾಗಿ ಜವಾನನನ್ನು ಹಿಂಬಾಲಿಸಿದ,